**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀಮತಿ ಹೇಮಲತಾ ನಾಯಕ್**
**ಇವರು ನಿಯಮ 72ರಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾಹಿತಿ:**

# ಸೂಚನೆ

**ಆರೋಗ್ಯ ಭಾಗ್ಯ ಕಸೆದುಕೊಂಡ ಕಾರ್ಖಾನೆಗಳ ತ್ಯಾಜ್ಯದ ಕುರಿತು.**

"ಕೊಪ್ಪಳ ತಾಲ್ಲೂಕಿನ ಹಿರೇಬಗನಾಳ ಭಾಗ ಹತ್ತಾರು ಕಾರ್ಖಾನೆಗಳಿರುವ ಕೈಗಾರಿಕಾ ವಲಯ. ಇಡೀ ಕರ್ನಾಟಕವಲ್ಲದೆ ಭಾರತ ದೇಶದಲ್ಲಿಯ ಮಹತ್ವದ ಕೈಗಾರಿಕಾ ವಲಯಗಳಲ್ಲಿ ನಮ್ಮ ಕೊಪ್ಪಳ ತಾಲ್ಲೂಕಿನ ಕೈಗಾರಿಕಾ ವಲಯ ಅತ್ಯಂತ ಮಹತ್ವದ್ದಾಗಿದೆ. ಆದರೆ, ಇವು ಹೊರಸೂಸುವ ಬೂದಿ-ಹೊಗೆಗಳು ಸುತ್ತಮುತ್ತಲಿನ ಹಲವು ಗ್ರಾಮಗಳ ಜನರಿಗೆ ಕಂಟಕವಾಗಿ ಪರಿಣಮಿಸಿದೆ.

ಈ ಗ್ರಾಮಗಳ ಯುವಕರಿಗೆ ಕನ್ಯೆ ಕೊಡಲು ಪಾಲಕರು ಮುಂದೆ ಬರದೇ ಇರುತ್ತಿರುವುದು ಒಂದೆಡೆಯಾದರೆ, ಇಲ್ಲಿನ ಹೆಣ್ಮಕ್ಕಳನ್ನು ಹೆರಿಗೆಗೆ ತವರಿಗೆ ಕರೆದು ತರಲಾರದ ಅಸಹಾಯಕ ಪರಿಸ್ಥಿತಿಯಲ್ಲಿ ಗ್ರಾಮಸ್ಥರಿದ್ದಾರೆ. ಈ ಕೈಗಾರಿಕಾ ವಲಯದ ಕರಿ ಬೂದಿ ಹಾಗೂ ವಿಷಾನಿಲಗಳು ಗರ್ಭಿಣಿಯರು, ಜನಿಸುವ ಮಕ್ಕಳು, ಹಿರಿಯರ ಶ್ವಾಸಕೋಶದ ಮೇಲೆ ಪರಿಣಾಮ ಬೀರುತ್ತಿದೆ. ಚಿಕ್ಕ ವಯಸ್ಸಿನವರು ಹಾಗೂ ಮಧ್ಯಮ ವಯಸ್ಸಿನವರೂ ಹಲವಾರು ಮಾರಣಾಂತಿಕ ಕಾಯಿಲೆಗಳಿಗೆ ತುತ್ತಾಗಿ ಸಾವಿಗೀಡಾಗುತ್ತಿದ್ದಾರೆ ಎಂಬ ವ್ಯಾಪಕ ದೂರುಗಳ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ"

# ಉತ್ತರ

ಕೊಪ್ಪಳ ವ್ಯಾಪ್ತಿಯಲ್ಲಿ 13 ಬೃಹತ್ ಕೈಗಾರಿಕೆಗಳು ಸ್ಪಾಂಜ್ ಐರನ್ ತಯಾರಿಕಾ ಘಟಕಗಳಾಗಿದ್ದು, ಸದರಿ ಕೈಗಾರಿಕೆಗಳು ಮಾಲಿನ್ಯ ನಿಯಂತ್ರಣದ ಉಪಕರಣಗಳನ್ನು ಅಳವಡಿಸಿ ಕಾರ್ಯನಿರ್ವಹಿಸುತ್ತಿರುತ್ತವೆ.

ಆದರೆ, ಸದರಿ ಕೈಗಾರಿಕೆಗಳಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಬಗ್ಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (KSPCB) ಕೊಪ್ಪಳ ಪ್ರಾದೇಶಿಕ ಕಚೇರಿಯಲ್ಲಿ ಹಲವಾರು ದೂರುಗಳು ಸ್ವೀಕೃತವಾಗಿರುತ್ತವೆ.

ಸಾರ್ವಜನಿಕರ ಆರೋಗ್ಯ ಸಮಸ್ಯೆಗಳ ಬಗ್ಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಆರೋಗ್ಯ ಇಲಾಖೆಯಲ್ಲಿ ದಾಖಲಾಗಿರುವ ಪ್ರಕರಣಗಳ ಕುರಿತು ವಿವರವಾದ ಮಾಹಿತಿಯನ್ನು ಸಲ್ಲಿಸುವಂತೆ KSPCB ಯಿಂದ ಆರೋಗ್ಯ ಇಲಾಖೆಯನ್ನು ಕೋರಿರುತ್ತಾರೆ.

ಸ್ಪಾಂಜ್ ಐರನ್ ತಯಾರಿಕಾ ಘಟಕಗಳ ಮೇಲೆ ಹಲವಾರು ದೂರುಗಳು ದಾಖಲಾದ ಕಾರಣ, ದಿನಾಂಕ 02.11.2023ರಂದು ಸ್ಪಾಂಜ್ ಐರನ್ ತಯಾರಿಕಾ ಘಟಕಗಳಿಗೆ ಪ್ರಸ್ತಾವಿತ ಮುಚ್ಚುವ ಆದೇಶವನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಜಾರಿ ಮಾಡಲಾಗಿರುತ್ತದೆ.

ಆದಾಗ್ಯೂ ಇಂತಹ ದೂರುಗಳಿಗೆ ಸಂಬಂಧಿಸಿದಂತೆ ಇಲಾಖೆಯ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, ಆರೋಗ್ಯ ಇಲಾಖೆ, ಕೆ.ಎಸ್.ಪಿ.ಸಿ.ಬಿ ಅಧಿಕಾರಿಗಳು, ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳ ಸಹಯೋಗದೊಂದಿಗೆ ಒಂದು ಸಮಿತಿಯನ್ನು ರಚಿಸಿ ಸೂಕ್ತ ಸಮೀಕ್ಷೆ ಮಾಡಿಸಿ ದೂರುಗಳ ನಿವಾರಣೆಗೆ ಸೂಕ್ತ ಕ್ರಮ ಜರುಗಿಸಲಾಗುತ್ತದೆ.

ಸಂಖ್ಯೆ ಸಿಐ 349 ಎಸ್‌ಪಿಐ 2023

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು